OS 59/2019

PW-1

ದಿನಾಂಕಃ **04.01.2022** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎನ್.ಎನ್.ಆರ್ ವಕೀಲರಿಂದಃ**

**ಸಾಕ್ಷಿಗೆ ಕನ್ನಡ ಭಾಷೆ ಅರ್ಥವಾಗದ ಕಾರಣ ಶ್ರೀ.ಎಲ್.ಎಂ ವಕೀಲರನ್ನು ಕನ್ನಡ ಅನುವಾದಕರನ್ನಾಗಿ ನೇಮಿಸಿ ಪ್ರಮಾಣ ವಚನ ಬೋದಿಸಲಾಯಿತು.**

ನನ್ನ ತಾತನ ಹೆಸರು ಗೋವಿಂದ ರೆಡ್ಡಿ ಎಂದರೆ ಸರಿ. ಗೋವಿಂದರೆಡ್ಡಿಯವರಿಗೆ 4 ಜನ ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ಅವರೆಂದರೆ ಹನುಮಂತರೆಡ್ಡಿ, ವೆಂಕಟಮ್ಮ, ಅಶ್ವಥಮ್ಮ, ಅಕ್ಕಲಮ್ಮ, ನಾರಾಯಣರೆಡ್ಡಿ ಮತ್ತು ರಾಮಾಂಜಿನಮ್ಮ ಎಂದರೆ ಸರಿ. ದಾವಾ ಅನುಸೂಚಿ ಆಸ್ತಿಗಳೆಲ್ಲವು ಮೂಲತಃ ನನ್ನ ತಾತ ಗೋವಿಂದರೆಡ್ಡಿಯವರಿಗೆ ಸೇರಿದ್ದು ಎಂದರೆ ಸರಿ. ಸದರಿ ಆಸ್ತಿಗಳು ಇಬ್ಬರು ಗಂಡು ಮಕ್ಕಳಿಗೆ ಮಾತ್ರ ವಿಭಾಗ ಆಗಿರುತ್ತದೆ, ಹೆಣ್ಣು ಮಕ್ಕಳಿಗೆ ವಿಭಾಗ ಆಗಿರುವುದಿಲ್ಲ. ವಿಭಾಗ ಯಾವಾಗ ಆಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಆಸ್ತಿಗಳು ವಿಭಾಗ ಆಗಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ದಾವಾ ಅನುಸೂಚಿ ಆಸ್ತಿಗಳಲ್ಲಿ ಗೋವಿಂದರೆಡ್ಡಿಯವರ ಮಕ್ಕಳಾದ ಹನುಮಂತರೆಡ್ಡಿ, ವೆಂಕಟಮ್ಮ, ಅಶ್ವಥಮ್ಮ, ಅಕ್ಕಲಮ್ಮ, ನಾರಾಯಣರೆಡ್ಡಿ ಮತ್ತು ರಾಮಾಂಜಿನಮ್ಮ ರವರಿಗೂ ಹಕ್ಕು ಇರುತ್ತದೆ, ಅವರನ್ನು ನೀವು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾರಾಯಣರೆಡ್ಡಿ ಯವರು ಇದೇ ನ್ಯಾಯಾಲಯದಲ್ಲಿ ದಾವಾ ಅನುಸೂಚಿ ಆಸ್ತಿಗಳ ವಿಭಾಗ ಕೋರಿ ದಾವಾ ದಾಖಲಿಸಿದ್ದರುಎಂದರೆ ಸಾಕ್ಷಿ ದಾಖಲಿಸಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ದಾವೆ ಅಪೀಲು ನ್ಯಾಯಾಲಯದಲ್ಲಿ ಪೆಂಡಿಂಗ್ ಇದೆ ಎಂದರೆ ಸಾಕ್ಷಿ ಪೆಂಡಿಂಗ್ ಇಲ್ಲ ಎಂದು ಉತ್ತರಿಸುತ್ತಾರೆ. ನಾರಾಯಣರೆಡ್ಡಿ ಯವರು ತಹಶೀಲ್ದಾರ ನ್ಯಾಯಾಲಯದಲ್ಲಿ ಸಹ ಕೇಸ್ ನಡೆಸಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ವಿಭಾಗ ಆಗಿದೆ ಎಂದು ಹೇಳಿದ್ದಿರಿ

ಹಾಗಾದರೆ ನಾರಾಯಣರೆಡ್ಡಿಯವರಿಗೆ ವಿಭಾಗದಲ್ಲಿ ಯಾವ ಯಾವ ಸರ್ವೆ ನಂಬರ್ ಆಸ್ತಿಗಳು ವಿಭಾಗದಲ್ಲಿ ಬಂದಿವೆ ಎಂದು ಹೇಳಲು ಆಗುವುದಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಮ್ಮ ಮತ್ತು ತಂದೆ ಕುಟುಂಬದ ವ್ಯವಸ್ತೆಗಾಗಿ ಸ್ವತ್ತುಗಳನ್ನು ಅವರವರ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದೀರಿ ಆ ರೀತಿ ಯಾವ ವರ್ಷ ಮಾಡಿಕೊಂಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಮ್ಮ ಮತ್ತು ತಂದೆ ಯಾವ ಯಾವ ಸರ್ವೆ ನಂಬರ್ ಆಸ್ತಿಗಳಲ್ಲಿ ಅವರವರ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದು ನಿಮಗೆ ಹೇಳಲು ಆಗುವುದಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.  ನಮ್ಮ ಕುಟುಂಬದ ನಿರ್ವಹಣೆಯನ್ನು ನನ್ನ ತಂದೆಯೇ ಮಾಡುತ್ತಿದ್ದಾರೆ ಎಂದರೆ ಸರಿ. ಹೆಣ್ಣು ಮಕ್ಕಳ ಮದುವೆಯನ್ನು ನಮ್ಮ ತಂದೆಯೇ ಮಾಡಿರುತ್ತಾರೆ ಎಂದರೆ ಸರಿ. ನನ್ನ ಅಕ್ಕ ಸುವರ್ಣಮ್ಮ ನವರ ಮದುವೆ ದಿಃ 02.03.1972 ರಲ್ಲಿ ಆಗಿರುತ್ತದೆ ಎಂದರೆ ಸರಿ. ನನ್ನ ಮದುವೆ ದಿಃ 21.05.1983 ರಲ್ಲಿ ಆಗಿರುತ್ತದೆ ಎಂದರೆ ಸರಿ. ನನ್ನ ತಂಗಿ ರತ್ನಮ್ಮನ ಮದುವೆ ದಿಃ 14.05.1986 ರಲ್ಲಿ ಆಗಿರುತ್ತದೆ ಎಂದರೆ ಸರಿ. ಇನ್ನೊಬ್ಬ ತಂಗಿ ರಾಮಾಂಜಿನಮ್ಮನವರ ಮದುವೆ ದಿಃ 18.06.1992 ರಂದು ಆಗಿರುತ್ತದೆ ಎಂದರೆ ಸರಿ. ನನ್ನ ತಮ್ಮ ಗೋವಿಂದ ರೆಡ್ಡಿಯವರ ಮದುವೆ ದಿಃ 02.04.1996 ರಂದು ಆಗಿರುತ್ತದೆ ಎಂದರೆ ಸರಿ.

ನಿಮ್ಮ ಅಕ್ಕ ಸುವರ್ಣಮ್ಮನವರ ಮದುವೆಗೆ ರೂ. 8 ಲಕ್ಷ ಖರ್ಚಾಗಿರುತ್ತದೆ ಎಂದರೆ  ಸಾಕ್ಷಿ ಇಲ್ಲ ಸುಮಾರು ರೂ.10 ಸಾವಿರ ಖರ್ಚಾಗಿರಬಹುದು ಎಂದು ಉತ್ತರಿಸುತ್ತಾರೆ.  ನಿಮ್ಮ ಮದುವೆಗೆ ಸುಮಾರು ರೂ. 13 ಲಕ್ಷ ಖರ್ಚಾಗಿರುತ್ತದೆ ಎಂದರೆ ಸಾಕ್ಷಿ ಇಲ್ಲ ಸುಮಾರು ರೂ.12 ಸಾವಿರ ಖರ್ಚಾಗಿರಬಹುದು ಎಂದು ಉತ್ತರಿಸುತ್ತಾರೆ. ರತ್ನಮ್ಮನವರ ಮದುವೆಗೆ ರೂ. 18 ಲಕ್ಷ ಖರ್ಚಾಗಿರುತ್ತದೆ ಎಂದರೆ  ಸಾಕ್ಷಿ ಇಲ್ಲ 12 ತೊಲ ಬಂಗಾರ ಕೊಟ್ಟು ಸುಮಾರು ರೂ.12 ಸಾವಿರ ಮದುವೆಗೆ ಖರ್ಚಾಗಿರಬಹುದು ಎಂದು ಉತ್ತರಿಸುತ್ತಾರೆ.  ರಾಮಾಂಜಿನಮ್ಮನವರ ಮದುವೆಗೆ ರೂ. 21 ಲಕ್ಷ ಖರ್ಚಾಗಿರುತ್ತದೆ ಎಂದರೆ  ಸಾಕ್ಷಿ ಇಲ್ಲ 5 ತೊಲ ಬಂಗಾರ ಕೊಟ್ಟು ಧರ್ಮಸ್ಥಳದಲ್ಲಿ

ಸುಮಾರು ರೂ.7 ರಿಂದ 8 ಸಾವಿರ ಖರ್ಚು ಮಾಡಿ ಮದುವೆ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ನನ್ನ ಅಕ್ಕ ಸುವರ್ಣಮ್ಮನವರಿಗೂ 5 ತೊಲ ಬಂಗಾರ ಕೊಟ್ಟಿರುತ್ತಾರೆ. ನಿಮ್ಮ ತಮ್ಮ ಗೋವಿಂದರೆಡ್ಡಿಯವರ ಮದುವೆಗೂ ಸಹ ನಿಮ್ಮ ತಂದೆ 8 ಲಕ್ಷ ಖರ್ಚು ಮಾಡಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

ನಿಮ್ಮ ತಂಗಿ ರತ್ನಮ್ಮ 1997 ನೇ ಇಸ್ವೀಯವರೆಗೂ ತಮ್ಮ ಗಂಡನನ್ನು ಬಿಟ್ಟು ನಿಮ್ಮ ತಂದೆಯ ಜೊತೆಯಲ್ಲಿಯೇ ವಾಸವಾಗಿದ್ದರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ರತ್ನಮ್ಮನವರನ್ನು ನಿಮ್ಮ ತಂದೆಯವರೇ ಮನೆಯಲ್ಲಿಟ್ಟುಕೊಂಡು ಸಾಕಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ರತ್ನಮ್ಮನ ಮಗ ರಾಜೀವರೆಡ್ಡಿಯವರನ್ನು ನಿಮ್ಮ ತಂದೆಯವರೇ ಓದಿಸಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯವರು ಮಕ್ಕಳ ಮದುವೆಗಾಗಿ ಮತ್ತು ಕುಟುಂಬದ ನಿರ್ವಹಣೆಗಾಗಿ ಬಹಳಷ್ಟು ಸಾಲ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

ಎಗುವಪಾಳ್ಯಂ ಬಾಸ್ಕರ ರೆಡ್ಡಿ ಯವರು ನನಗೆ ಗೊತ್ತಿಲ್ಲ. ಸದರಿಯವರಿಂದ ನಿಮ್ಮ ತಂದೆ ಒಟ್ಟು ರೂ.15 ಲಕ್ಷಗಳನ್ನು ಸಾಲವಾಗಿ ಪಡೆದಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ದೇವನಕೆರೆ ಮಂಜುನಾಥ ರವರಿಂದ ನಿಮ್ಮ ತಂದೆ ರೂ. 7 ಲಕ್ಷ ಸಾಲ ಪಡೆದಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದೇವಲಕೆರೆ ನಾಗಭೂಷಣರೆಡ್ಡಿ ಯವರಿಂದ ರೂ.5 ಲಕ್ಷ ಹಾಗೂ ಇನ್ನೊಂದು ಸಾರಿ 4 ಲಕ್ಷ ನಿಮ್ಮ ತಂದೆ ಸಾಲವಾಗಿ ಪಡೆದಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ನನ್ನ ತಂದೆಗೆ ಪಾವಗಡದ ಟೋಲ್ ಗೇಟ್ ಹತ್ತಿರ ಅಪಘಾತವಾಗಿ ಕಾಲಿಗೆ ಪೆಟ್ಟಾಗಿತ್ತು ಎಂದರೆ ಸರಿ. ನನ್ನ ತಂದೆ ಕಾಲಿನ ಮೂಳೆ ಮುರಿತದಿಂದಾಗಿ ಬಹಳಷ್ಟು ದಿನ ಎಂ.ಎಸ್ ರಾಮಯ್ಯ ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಎಂದರೆ ಸರಿ. ನಿಮ್ಮ ತಂದೆಯವರು ಕಾಲಿಗೆ ಶಸ್ತ್ರ ಚಿಕಿತ್ಸೆ ಮಾಡಿ

ರಾಡ್ ಅಳವಡಿಸಿದ್ದು ಅವರ ಚಿಕಿತ್ಸೆಗಾಗಿ ರೂ.5 ಲಕ್ಷ ಖರ್ಚಾಗಿರತ್ತದೆ ಎಂದರೆ ಸಾಕ್ಷಿ ಇಲ್ಲ ಉಚಿತವಾಗಿ ಚಿಕಿತ್ಸೆ ಪಡೆದಿರುತ್ತಾರೆ , ಔಷದೋಪಚಾರಕ್ಕೆ ಸುಮಾರು ರೂ.5 ಸಾವಿರ ಮಾತ್ರ ಖರ್ಚಾಗಿರಬಹುದು ಎಂದು ಉತ್ತರಿಸುತ್ತಾರೆ. ಸದರಿ ರಾಮಯ್ಯ ಆಸ್ಪತ್ರೆಯಲ್ಲಿ ಯಾವ ಸ್ಕೀಮ್‌ನ ಆಧಾರದಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲಾಗಿದೆ ಎಂದು ಹೇಳಲಾಗುವುದಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಸಹೋದರರಾದ ಗೋವಿಂದರೆಡ್ಡಿ ಹಾಗೂ ಶ್ರೀನಿವಾಸರೆಡ್ಡಿಯವರು ಸೇರಿ ನಿಮ್ಮ ತಂದೆಯ ಆಸ್ಪತ್ರೆಯ ಖರ್ಚಿಗಾಗಿ ಕೃಷ್ಣಾರೆಡ್ಡಿಯವರಿಂದ ರೂ.5 ಲಕ್ಷ ಸಾಲ ಪಡೆದಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ಸಾಲಗಳನ್ನು ತೀರಿಸಲು ನಿಮ್ಮ ತಂದೆ ವಿಜಯ ಬ್ಯಾಂಕ್(ಬ್ಯಾಂಕ್ ಆಫ್ ಬರೋಡಾ) ನಲ್ಲಿ 2013 ರಲ್ಲಿ ದಾವಾ ಜಮೀನಿನನ್ನು ಆಧಾರವಾಗಿಟ್ಟು ರೂ.5 ಲಕ್ಷ ಸಾಲ ಪಡೆದಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಇದೇ ನ್ಯಾಯಾಲಯದಲ್ಲಿ ಬ್ಯಾಂಕಿನವರು ಸದರಿ ಸಾಲದ ಹಣದ ವಸೂಲಿಗಾಗಿ ನಿಮ್ಮೆಲ್ಲರ ವಿರುದ್ಧ ದಾವಾ ಹಾಕಿದ್ದಾರೆ ಎಂದರೆ  ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಇದೇ ಜಮೀನಿನ ಆಧಾರದ ಮೇಲೆ ಪುನಃ ನಿಮ್ಮ ತಂದೆ ಅದೇ ಬ್ಯಾಂಕಿನಲ್ಲಿ ರೂ.21 ಲಕ್ಷ ಸಾಲ ಮಾಡಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಪುನಃ ನಿಮ್ಮ ತಂದೆ ಅದೇ ಬ್ಯಾಂಕಿನಲ್ಲಿ ರೂ.30 ಲಕ್ಷ ಸಾಲ ಮಾಡಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ತೀರಿಕೊಂಡ ನಂತರ ನೀವು ಯಾರು ಸಾಲವನ್ನು ಮರುಪಾವತಿಸದ ಕಾರಣ ಬ್ಯಾಂಕಿನವರು ಇದೇ ನ್ಯಾಯಾಲಯದಲ್ಲಿ ಒ.ಎಸ್ ನಂಃ 18/2020, 21/2020, 82/2020, 84/2020 ದಾವೆಗಳನ್ನು ಹಾಕಿದ್ದಾರೆ ಎಂದರೆ  ಸಾಕ್ಷಿ ನನಗೆ ಸಾಲ ಮಾಡಿರುವುದು ಗೊತ್ತಿಲ್ಲ ಮೇಲೆ ಹೇಳಿದ ಕೇಸ್ ಇರುವ ಬಗ್ಗೆಯು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ನಮ್ಮ ತಂದೆ ತೀರಿಕೊಂಡ ನಂತರ ಕುಟುಂಬದ ಯಜಮಾನಿಕೆಯನ್ನು ನನ್ನ ತಮ್ಮ ಶ್ರೀನಿವಾಸರೆಡ್ಡಿ ವಹಿಸಿಕೊಂಡಿರುತ್ತಾರೆ. ರಸ್ತೆಯ ಅಪಘಾತದಲ್ಲಿ ನನ್ನ ತಂದೆ, ನನ್ನ ಅಕ್ಕ

ಸುವರ್ಣಮ್ಮ, ಆಕೆಯ ಗಂಡ ವೆಂಕಟರಾಮರೆಡ್ಡಿ ಮತ್ತು ಅವರ ಮಕ್ಕಳಾದ ಶ್ರೀನಿವಾಸರೆಡ್ಡಿ ಹಾಗೂ ಶ್ವೇತಾ ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿಯವರ ಮೃತದೇಹಗಳನ್ನು ಸಾಗಿಸಲು ಮತ್ತು ಅಂತಸಂಸ್ಕಾರ ಮಾಡಲು ನಿಮ್ಮ ತಮ್ಮ ಶ್ರೀನಿವಾಸರೆಡ್ಡಿಯವರು ಸಾಲ ಮಾಡಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

ನಿಮ್ಮ ತಂದೆ ಅಪಘಾತದಲ್ಲಿ ತೀರಿಕೊಂಡ ನಂತರ ನಿಮ್ಮ ತಾಯಿಯವರಿಗೆ ಬ್ರೇನ್ ಟ್ಯೂಮರ್ ಆದ ಕಾರಣ ಬೆಂಗಳೂರಿನ ನಿಮಾನ್ಸ ಆಸ್ಪತ್ರೆಯಲ್ಲಿ ಹಾಗೂ ಇತರೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಲು ನಿಮ್ಮ ತಮ್ಮ ಶ್ರೀನಿವಾಸರೆಡ್ಡಿ ರೂ.3 ಲಕ್ಷ ಸಾಲ ಮಾಡಿ ಖರ್ಚು ಮಾಡಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ನಿಮಾನ್ಸ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ಪಡೆದಿರುತ್ತಾರೆ ಎಂದು ಉತ್ತರಿಸುತ್ತಾರೆ. ನಿಮ್ಮ ತಾಯಿಗೆ ಚಿಕಿತ್ಸೆ ಕೊಡಿಸಿದ್ದರು ಸಹ ಫಲಕಾರಿಯಾಗದೇ ತೀರಿಕೊಂಡಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಈ ಎಲ್ಲಾ ವಿಚಾರಗಳು ನಿಮಗೆ ಗೊತ್ತಿದ್ದರು ಸಹ ನೀವು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಗಳ ಸರ್ವೆ ನಂಬರ್ , ವಿಸ್ತೀರ್ಣವನ್ನು ಹಾಗೂ ಚೆಕ್‌ಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ. ನಮ್ಮ ಊರಿನಲ್ಲಿ ಒಂದು ಮನೆ ಇದೆ ಅದನ್ನು ಈ ಕೇಸಿನಲ್ಲಿ ಸೇರಿಸಿರುವುದಿಲ್ಲ. ನಿಮ್ಮ ಕುಟುಂಬದಲ್ಲಿ ಒಬ್ಬರಿಗೊಬ್ಬರು ಗಲಾಟೆ ಮಾಡಿಕೊಂಡು ಬಿನ್ನಾಭಿಪ್ರಾಯಗಳು ಉಂಟುಗಾಗಿವೆ ಎಂದು ನಾನು ಹೇಳಿಲ್ಲ. ನಿಮ್ಮ ಕುಟುಂಬದಲ್ಲಿ ದಾವಾ ಆಸ್ತಿಗಳ ವಿಭಾಗದ ಕುರಿತಾಗಿ ಯಾವುದಾದರೂ ಪಂಚಾಯಿತಿ ಆಗಿದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ಕೆಲವು ಪಕ್ಷಗಾರರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಹಾಗೂ ಕೆಲವು ಆಸ್ತಿಗಳನ್ನು ಸೇರಿಸಿರುವುದಿಲ್ಲ ಸುಳ್ಳು ಕೇಸನ್ನು ಹಾಕಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಯನ್ನು ಆಧಾರವಾಗಿಟ್ಟು ವಿಜಯ ಬ್ಯಾಂಕಿನಲ್ಲಿ ಮಾಡಿರುವ ಸಾಲವನ್ನು ಮರೆಮಾಚಿ ನೀವು ಈ ದಾವೆಯನ್ನು ಹಾಕಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

ಸಾಲದ ಹಣವನ್ನು ನೀವು ಸಹ ಕಟ್ಟಬೇಕಾಗುತ್ತದೆ ಎಂಬ ಕಾರಣಕ್ಕಾಗಿ ಅದನ್ನು ಮರೆಮಾಚಿ ಈ ದಾವೆ ಹಾಕಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.